ಹಿಂದಿನ ದ್ವಾಕ್ರ ಯೋಜನೆಯಡಿ ಫಲಾನುಭವಿಗಳಿಗೆ ಸಾಲ ಕೊಟ್ಟು ಪದಾಧಿಕಾರಿಗಳನ್ನು ಮಾಡಿ, ಆ ಕಚ್ಚಾವಸ್ತುಗಳು ಸಿಗದೆ, ಅಲ್ಲಿನ ವರ್ಕ್‌ಶೆಡ್ಸ್ ಮುಚ್ಚಿಹೋಗಿವೆ. ಸಣ್ಣ ಕೈಗಾರಿಕೆಯವರು ಫಲಾನುಭವಿಗಳನ್ನು ಸಾಲಗಾರರನ್ನಾಗಿ ಮಾಡಿದ್ದಾರೆ. ಇದರ ಬಗ್ಗೆ ಕೂಡ ಸಣ್ಣ ಕೈಗಾರಿಕಾ ಸಚಿವರು ಗಮನವನ್ನು ಹರಿಸಬೇಕು. ಕಡೂರು ತಾಲ್ಲೂಕಿನಲ್ಲಿ ಎಂಟು ಕಂಬಳಿ ನೇಯುವ ವರ್ಕ್‌ಷೆಡ್‌ಗಳನ್ನು ಮಾಡಿದ್ದು ಆ ಕಂಬಳಿ ನೇಯುವ ವರ್ಕ್ ಷೆಡ್‌ನವರಿಗೆ ಕಚ್ಚಾವಸ್ತುವಾದ ಉಣ್ಣೆ ಸಿಗುತ್ತಿಲ್ಲ. ಸಣ್ಣ ಕೈಗಾರಿಕೆಯವರು ತಿಪಟೂರು ಸೊಸೈಟಿಯಿಂದ ಮೂರು ವರ್ಷ ಕೊಡಿಸಿದರು. ನಂತರ ಕೊಡಿಸಲೇ ಇಲ್ಲ. ಅವರಿಗೆ ಅದನ್ನು ಕೊಡಿಸಿದರೆ ಪ್ರತಿ ದಿವಸ 100 ರೂ.ನಿಂದ 120 ರೂ.ನವರೆಗೂ ದುಡಿಯುತ್ತಾರೆ. ಹಿಂದೆ ಜಿಲ್ಲಾ ಪರಿಷತ್ತಿನಲ್ಲಿ 12 ಸಾವಿರ ಕಂಬಳಿಗಳನ್ನು ರಕ್ಷಣಾ ಇಲಾಖೆಯರಿಗೆ ನಾವು ಮಾಡಿಕೊಟ್ಟಿದ್ದೇವೆ. ಮಾನ್ಯ ಸಚಿವರು ತರೀಕೆರೆಗೆ ಬಂದಂಥ ಸಂದರ್ಭದಲ್ಲಿ ಕಡೂರಿಗೂ ಬಂದು ಪರಿಸ್ಥಿತಿಯನ್ನು ನೋಡಬೇಕು. ಅದನ್ನು ಸಾರ್ವಜನಿಕರ ಉಪಯೋಗಕ್ಕಾದರೂ ವರ್ಕ್ ಷೆಡ್‌ಗಳನ್ನು ಬಿಟ್ಟುಕೊಡಿ.

ಶ್ರೀ ಎಸ್.ಆರ್.ಕಾಶಪ್ಪನವರ್: ಮಾನ್ಯ ಅಧ್ಯಕ್ಷರೆ, ನಾನು ತರೀಕೆರೆಗೆ ಬಂದಾಗ ತಮ್ಮಲ್ಲಿಗೂ ಕೂಡ ನಾನು ಗಮನವನ್ನು ಹರಿಸುತ್ತೇನೆ. ತಾವು ಕೇಳಿರುವ ವಿಚಾರಕ್ಕೆ ನಾನು ಸ್ಪಷ್ಟವಾದ ಉತ್ತರವನ್ನು ಹೇಳುವುದೇನೆಂದರೆ 'ವಿಶ್ವ'ದಲ್ಲಿ ನಾವು ಸಹಾಯ ಸೌಲಭ್ಯಗಳನ್ನು ಪ್ರಯೋಜನದಾರರಿಗೆ ನೀಡುತ್ತೇವೆ. ಅವರಿಗೆ ಮನೆಗಳನ್ನು ಕಟ್ಟಿಕೊಡುತ್ತೇವೆ. ಅವುಗಳ ಬಗ್ಗೆ ಪ್ರತಿವರ್ಷವೂ ಮೆಯಿನ್‌ಟೆನೆನ್ಸ್ ಇಟ್ಟುಕೊಂಡು ದುರಸ್ತಿ ಕಾರ್ಯವನ್ನಾಗಲಿ ಇಂಥವುಗಳಿಗೆ ಸ್ವಯಂ ಸೇವಾ ಸಂಸ್ಥೆಗಳಿಗೆ ಅನುದಾನದ ರೂಪದಲ್ಲಿ ನಾವು ಅವರಿಗೆ ಸಹಾಯಧನವೆಂದು ಕೊಡುತ್ತಿದ್ದೇವೆಯೇ ಏನಹ ಅವುಗಳನ್ನು ನಾವೇ ವಿಶ್ವದಲ್ಲಿ ಪ್ರತಿವರ್ಷವೂ ಮೆಯಿನ್‌ಟೈನ್ ಮಾಡುವುದಕ್ಕೆ ಬರುವುದಿಲ್ಲವೆನ್ನುವ ವಿಷಯವನ್ನು ಹೇಳುತ್ತೇನೆ. ಅಲ್ಲಿ ಏನಾಗಿದೆಯೋ ನಾನು ಸ್ಥಳಪರಿಶೀಲನೆ ಮಾಡಿ ನಾನು ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಅಥಣಿ ತಾಲ್ಲೂಕನ್ನು 'ಬೂದು' ಪ್ರದೇಶವೆಂದು ವರ್ಗೀಕರಣಗೊಳಿಸಿರುವ ಬಗ್ಗೆ.

212(2570)

ಶ್ರೀ ಭರಮಗೌಡ(ಕಾಗವಾಡ): ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನ್ಯಾಷನಲ್ ಜಿಯಲಾಜಿಕಲ್ ಸರ್ವೆಯವರು ಅಥಣಿ ತಾಲ್ಲೂಕನ್ನು ಸಂಪೂರ್ಣವಾಗಿ ಗ್ರೇ ಏರಿಯಾ ಅಂತ ಘೋಷಣೆ ಮಾಡಲಾಗಿದೆಯೇ; ಈ ರೀತಿ ಮಾಡಿರುವುದರಿಂದ ಬಡ ರೈತರಿಗೆ ಕೊಳವೆ ಬಾವಿಗಳು ತೋಡಲು ಅವಕಾಶ ಇರುವದಿಲ್ಲ ಹಾಗೂ ಬ್ಯಾಂಕ್‌ನಿಂದ ಸಮಯಕ್ಕೆ ರೈತರಿಗೆ ಸಾಲ ಪಡೆಯಲು ಸಾಧ್ಯವಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಅಥಣಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಕಾಗವಾಡ ಮತ ಕ್ಷೇತ್ರವು ಸಂಪೂರ್ಣವಾಗಿ ಕೃಷ್ಣ ನದಿ ದಡದಲ್ಲಿ ಇರುವುದರಿಂದ ಈ ಪ್ರದೇಶದಲ್ಲಿ ಅಂತರ್ಜಲ ನೀರಿನ ಮಟ್ಟ ಮೇಲಕ್ಕೆ ಇದ್ದು ಈ ರೀತಿ ಗ್ರೇ ಏರಿಯಾ ಮಾಡಿರುವುದರಿಂದ ಇಲ್ಲಿನ ರೈತರಿಗೂ ಸಹ ಅನಾನುಕೂಲವಾಗುವುದರಿಂದ ಕಾಗವಾಡ ಮತಕ್ಷೇತ್ರದಲ್ಲಿ ಬರುವ ಎಲ್ಲಾ ಗ್ರಾಮಗಳನ್ನು ಗ್ರೇ ಏರಿಯಾದಿಂದ ವಿಮುಕ್ತಿಗೊಳಿಸಲು ಸರ್ಕಾರ ಕ್ರಮ ಕೈಕೊಳ್ಳುವುದೇ?

ಶ್ರೀ ವಿ.ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು):

ಅ) ರಾಜ್ಯದ ಗಣಿ ಮತ್ತು ಭೂವಿಜ್ಞಾನ ಇಲಾಖೆಯು 31-12-1994ರ ಅಂತ್ಯಕ್ಕೆ ಅಂತರ್ಜಲ ಮೌಲೀಕರಣ ಸಮೀಕ್ಷೆಯನ್ನು ಮಾಡಿ ಬಂದ ವಿವರಗಳ ಆಧಾರದ ಮೇಲೆ ನಬಾರ್ಡ್, ಅಥಣಿ ತಾಲ್ಲೂಕನ್ನು 'ಬೂದು' ಪ್ರದೇಶವೆಂದು ವರ್ಗೀಕರಣ ಮಾಡಿದೆ. ಈ ವಿಚಾರದಲ್ಲಿ ರೈತರಿಗೆ ಬ್ಯಾಂಕಿನಿಂದ ಸಾಲ ದೊರೆಯುತ್ತಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) 1997ರ ಕೇಂದ್ರಿಯ ಅಂತರ್ಜಲ ಅಂದಾಜು ಸಮಿತಿಯವರು ರಾಜ್ಯದಾದ್ಯಂತ ಜಲಾನಯನವಾರು ವಿಂಗಡನೆ ಮಾಡಿ 1999ರ ಅಂತ್ಯದವರೆಗಿನ ಅಂತರ್ಜಲ ಮೌಲೀಕರಣವನ್ನು ಮಾಡುವಂತೆ ಸೂಚಿಸಿದ ಪ್ರಕಾರ ಇಲಾಖೆಯು ಈಗಾಗಲೇ ಅಂತರ್ಜಲದ ಸ್ಥಿತಿಗತಿಯ ಬಗ್ಗೆ ಮೌಲೀಕರಣ ಮಾಡಿ ಕರಡು ವರದಿ ತಯಾರಾಗಿದೆ. ಸದರಿ ವರದಿಯು ನಬಾರ್ಡ್‌ನಿಂದ ಅನುಮೋದನೆಗೊಂಡು ಪ್ರಕಟಪಡಿಸಿದ ಮೇಲೆ 'ಗ್ರೇ' ಪ್ರದೇಶವೆಂದು ವರ್ಗೀಕರಣ ಮಾಡಿರುವ ಅಥಣಿ ತಾಲ್ಲೂಕಿನ ಕೆಲವು ಪ್ರದೇಶಗಳು ವಿಮುಕ್ತಿಗೊಳ್ಳುವ ಸಾಧ್ಯತೆ ಇರುತ್ತದೆ.

ಶ್ರೀ ಭರಮಗೌಡ ಅ.ಕಾಗೆ: ಮಾನ್ಯ ಅಧ್ಯಕ್ಷರೇ, ಈಗಾಗಲೇ ಏಳೆಂಟು ವರ್ಷಗಳಿಂದ ಅಲ್ಲಿಯ ರೈತರಿಗೆ ಬಹಳ ತೊಂದರೆಯಾಗುತ್ತಿದೆ. ಆದರೆ ಇವರು ಅಂತರಜಲ ಸ್ಥಿತಿಗತಿ ಬಗ್ಗೆ ಮೌಲೀಕರಣ ಮಾಡಿ ಕರಡು ವರದಿ ತಯಾರಾಗಿದೆ. ಸದರಿ ವರದಿಯು ನಬಾರ್ಡ್‌ನಿಂದ ಅನುಮೋದನೆಗೊಂಡ ನಂತರ ಪ್ರಕಟಿಸಿದ ಮೇಲೆ ಗ್ರೇ ಪ್ರದೇಶವನ್ನು ವರ್ಗೀಕರಣ ಮಾಡಿರುವ ಅಥಣಿ ತಾಲ್ಲೂಕಿನ ಕೆಲವು

ಪ್ರದೇಶಗಳನ್ನು ಉತ್ತಮಗೊಳಿಸುತ್ತೇವೆಂದು ಹೇಳಿದ್ದಾರೆ. ಆದರೆ ಈಗಾಗಲೇ ಅರ್ಧಕ್ಕಿಂತ ಹೆಚ್ಚಿಗೆ ಭಾಗ ಅಲ್ಲಿ ಕೃಷ್ಣಾ ನದಿ ಹರಿಯುವುದರಿಂದ ಅಲ್ಲಿ ಒಂದು ವಿದ್ಯುತ್ ಕನೆಕ್ಷನ್ನನ್ನು ತೆಗೆದುಕೊಳ್ಳುವುದಕ್ಕೆ 25 ಸಾವಿರ ರೂಪಾಯಿಗಳನ್ನು ಕೊಟ್ಟರೂ ಸಹ ಅಲ್ಲಿ ಕನೆಕ್ಷನ್‌ಗಳನ್ನು ಕೊಡುತ್ತಿಲ್ಲ. ಆದ್ದರಿಂದ ತ್ವರಿತವಾಗಿ ಈ ಗ್ರೇ ಪ್ರದೇಶವನ್ನು ರದ್ದುಗೊಳಿಸಿ ಸರ್ಕಾರ ಆದೇಶ ಹೊರಡಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಅಲ್ಲಿನ ರೈತರಿಗೆ ಒಂದು ಕೊಳವೆ ಬಾವಿಯಾಗಲಿ, ಅಥವಾ ಒಂದು ಪಂಪ್‌ಸೆಟ್‌ನ್ನು ಒದಗಿಸಿಕೊಡುವುದಕ್ಕೂ ಬಹಳ ಅನಾನುಕೂಲವಾಗುತ್ತಿದೆ ಎಂದು ನಾನು ತಮ್ಮೂಲಕ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಮತ್ತು ಈ ಬೂದು ಪ್ರದೇಶವನ್ನು ತ್ವರಿತವಾಗಿ ಅಲ್ಲಿ ತೆಗೆಯಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ವಿ.ಮುನಿಯಪ್ಪ: ಮಾನ್ಯ ಅಧ್ಯಕ್ಷರೇ, ಈ ಅಂತರ್ಜಲ ಸಮೀಕ್ಷೇಯನ್ನು ನಮ್ಮ ಕೇಂದ್ರ ಅಂತರ್ಜಲ ಮಂಡಳಿ ಅವರೊಂದು ಕಡೆ ಸರ್ವೆ ಮಾಡುತ್ತಾರೆ. ಮತ್ತು ರಾಜ್ಯದ ಅಂತರ್ಜಲ ಇಲಾಖೆಯವರೂ ಸಹ ಸರ್ವೆಯನ್ನು ಮಾಡುತ್ತಾರೆ. ಅದನ್ನು ಪ್ರತಿ ಐದು ವರ್ಷಕ್ಕೊಮ್ಮೆ ಸರ್ವೆಯನ್ನು ಮಾಡಿಸುವ ವ್ಯವಸ್ಥೆಯನ್ನು ಅಳವಡಿಸಿಕೊಂಡಿದೆ. ಎರಡೂ ಇಲಾಖೆಯವರೂ ಇದನ್ನು ಸರ್ವೆ ಮಾಡಿ ಇದನ್ನು ನಬಾರ್ಡ್‌ಗೆ ಕಳುಹಿಸಿಕೊಡುವುದು ಇದೆ. ನಬಾರ್ಡ್ ಸೂಚನೆಯ ಆಧಾರದ ಮೇಲೆಯೇ ಈ ಸರ್ವೆಯನ್ನು ಮಾಡುವುದು. 1994ರಲ್ಲಿ ಸರ್ವೆಯಾಗಿತ್ತು. ಮತ್ತು 1999ರಲ್ಲಿ ಸರ್ವೆಯಾಗಿದೆ. ಆ ಸರ್ವೆ ಆಧಾರದ ಮೇಲೆ ನಮ್ಮ ರಾಜ್ಯದ ಅಂತರ್ಜಲ ಇಲಾಖೆಯವರು ಸಮೀಕ್ಷೇಯನ್ನು ಮಾಡಿ ವರದಿಯನ್ನು ಕಳುಹಿಸಿಕೊಟ್ಟಿದ್ದೇವೆ. ಮತ್ತು ಕೇಂದ್ರ ಅಂತರ್ಜಲ ಮಂಡಳಿಯವರೂ ಸಹಾ ಸಮೀಕ್ಷೆಯನ್ನು ಮಾಡಿ ವರದಿಯನ್ನು ಕಳುಹಿಸಿಕೊಟ್ಟಿದ್ದಾರೆ. ಆ ಎರಡೂ ವರದಿಗಳನ್ನು ಕನ್‌ಸಾಲಿಡೇಟ್ ಮಾಡುವ ಎಕ್ಸ್‌ಪರ್ಟ್ಸ್ ಕಮಿಟಿ ನಬಾರ್ಡ್‌ನವರ ಹತ್ತಿರ ಇದೆ. ಅವರು ಈಗ ಅದನ್ನು ಸಮನ್ವಯಗೊಳಿಸಿ ಅಂತಿಮವಾಗಿ ವರದಿಯನ್ನು ಶೀಘ್ರದಲ್ಲೇ ಕಳುಹಿಸಿಕೊಡುವ ಬಗ್ಗೆ ನಮಗೆ ಮೆಸೇಜ್ ಸಿಕ್ಕಿದೆ. ಅದು ಬಂದನಂತರ ಅದನ್ನು ಯಾವ ಯಾವ ತಾಲ್ಲೂಕಿಗೆ ಎಷ್ಟೆಷ್ಟು ಅಂತರ್ಜಲ ಬಳಕೆಯಾಗಿದೆ, ಎಷ್ಟೆಷ್ಟು ಉಳಿಕೆ ಇದೆ, ಈಗ ಗ್ರೇ ಎಂದು ಏನು ಇದೆ, ಯಾವ ಭಾಗಗಳನ್ನು ನಾವು ಯಾವ ರೀತಿ ಘೋಷಣೆ ಮಾಡಬೇಕು ಎನ್ನುವ ಬಗ್ಗೆ ಅಂತಿಮವಾಗಿ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು: ಮಾನ್ಯ ಮುನಿಯಪ್ಪನವರೇ, ನನ್ನದೊಂದು ಪ್ರಶ್ನೆ ನಮ್ಮ ತಾಲ್ಲೂಕು ಸಹ ಗ್ರೇ ತಾಲ್ಲೂಕು ಎಂದು ಅನೌನ್ಸ್ ಮಾಡಿ ಎರಡು ವರ್ಷವಾಗಿದೆ. ನಿನ್ನೆ ನೋಡಿ, ಮುನಿಸಿಪಲ್ ಆಫೀಸ್ ಪಕ್ಕದಲ್ಲಿ ಟೌನ್ ಸುತ್ತಮುತ್ತ ಐದು ಬೋರ್‌ವೆಲ್‌ಗಳನ್ನು

ಹಾಕಿದ್ದಾರೆ. ಐದು ಬೋರ್‌ವೆಲ್‌ನಲ್ಲೂ ಐದೈದು ಸಾವಿರ ಗ್ಯಾಲನ್ ನೀರು ಸಿಕ್ಕಿದೆ. ನಮ್ಮ ತಾಲ್ಲೂಕಿನಲ್ಲಿ 1600 ಅರ್ಜಿಗಳು ಪಂಪ್‌ಸೆಟ್‌ಗೆ ಪೆಂಡಿಂಗ್ ಇದೆ. ನಾನು ಅಲ್ಲಿಗೆ ಹೋದರೆ ಆ ರೈತರೂ ನಮಗೆ ಅಷ್ಟೂ ಕಷ್ಟವನ್ನು ಕೊಡುತ್ತಾರೆ. ಅದನ್ನು ಬೇಗ ಇತ್ಯರ್ಥ ಮಾಡಿ.

ಶ್ರೀ ವಿ.ಮುನಿಯಪ್ಪ: ನಮ್ಮಲ್ಲಿ ಸರಾಸರಿ ಅಂತರ್ಜಲದ ಬಳಕೆ ಏನಿದೆ, ಅಲ್ಲಿರುವ ಅಂತರ್ಜಲದ ಲಭ್ಯತೆಯ ಬಗ್ಗೆ ಅದರಲ್ಲಿ ಎಷ್ಟು ಬಳಕೆ ಯಾಗಿದೆ, ಇನ್ನೆಷ್ಟು ಉಳಿಕೆ ಇದೆ ಎಂಬುದನ್ನು ನೋಡುತ್ತೇವೆ.

ಅಧ್ಯಕ್ಷರು: ನಿನ್ನೆ ಐದು ಬೋರ್‌ವೆಲ್‌ಗಳಲ್ಲಿ ಐದ್ನದು ಸಾವಿರ ಗ್ಯಾಲನ್ ನೀರು ಸಿಕ್ಕಿದೆ.

ಶ್ರೀ ವಿ.ಮುನಿಯಪ್ಪ: ಕೆಲವು ಕಡೆ ಸಿಗುತ್ತದೆ. ಕೆಲವು ಕಡೆ ಸೋರ್ಸ್ ಇರುತ್ತದೆ. ಅದು ಪರ್ಮನೆಂಟ್ ಆಗಿಯೇ ಇರುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ.

ಅಧ್ಯಕ್ಷರು: ಅದಕ್ಕೇನಾದರೂ ಅಮೆಂಡಮೆಂಟ್ ಮಾಡಿ. ಎಲ್ಲಿ ಸಿಗುತ್ತದೋ ಅಲ್ಲಿ ಹಾಕಿಕೊಳ್ಳುವುದಕ್ಕಾದರೂ ಆ ರೀತಿ ಮಾಡಿ.

ಶ್ರೀ ವಿ.ಮುನಿಯಪ್ಪ: ಅದಕ್ಕೆ ನಬಾರ್ಡ್‌ನವರು ಒಂದು ಹೊಸ ವ್ಯವಸ್ಥೆಯನ್ನು ಮಾಡಿದ್ದಾರೆ. ಜಲಾನಯನ ಪ್ರದೇಶಾವಾರು ಇದನ್ನು ಸಮೀಕ್ಷೆ ಮಾಡುವ ವ್ಯವಸ್ಥೆಯನ್ನು ಈ ಸಾಲಿಗೆ ಜಾರಿಗೆ ತಂದಿದ್ದಾರೆ. ಅದರಿಂದಲೇ ಇದು ತಡವಾಯಿತು.

ಅಧ್ಯಕ್ಷರು: ವಾಟರ್ ಷೆಡ್‌ಏರಿಯಾದ ಚೆಕ್ ಡ್ಯಾಮ್ಸ್, ಪರ್ಕ್ಯುಲೇಷನ್ ಟ್ಯಾಂಕ್ಸ್ ಎಲ್ಲಾ ಕಟ್ಟಿ ನಮ್ಮ ತಾಲ್ಲೂಕಿನಲ್ಲಿ ಕೆಲವು ಕಡೆ ಜಲ ಮೇಲೆ ಬರುತ್ತಿದೆ. ಇನ್ ಜನರಲ್ ಎಲ್ಲಾ ಕಡೆಯೂ ಗ್ರೇ ಎಂದು ಹೇಳಿ ಬಿಟ್ಟರೆ ಹೇಗೆ? ನೀವೇ ಹೇಳಿ.

ಶ್ರೀ ವಿ.ಮುನಿಯಪ್ಪ: ಜನರಲ್ ಆಗಿ 1994ರಲ್ಲಿ ಸಮೀಕ್ಷೆ ಮಾಡಿರುವುದು. ಅದೇ ವರದಿ ನಮ್ಮ ಹತ್ತಿರ ಇರುವುದು. ಈಗ ಅದರ ಆಧಾರದ ಮೇಲೆ ಅಲ್ಲೇನು ಅಂತರ್ಜಲ ಎಷ್ಟು ಬಳಕೆಯಾಗಿದೆ, ಎಷ್ಟು ಉಳಿಕೆ ಇದೆ, ಅದನ್ನು ಯಾವ ಯಾವ ರೀತಿ 65 ಪರ್‌ಸೆಂಟ್‌ಗೂ ಮೇಲ್ಪಟ್ಟು ಬಳಕೆಯಾಗಿದ್ದರೆ ಅದನ್ನು ಬೂದು ತಾಲ್ಲೂಕು ಎಂದು ಘೋಷಣೆ ಮಾಡುತ್ತಾರೆ. 85 ಪರ್‌ಸೆಂಟ್‌ಗೂ ಮೇಲೆ ಅಂತರ್ಜಲ ಬಳಕೆಯಾಗಿದ್ದರೆ ಅದನ್ನು ಕಪ್ಪು ಪ್ರದೇಶ ಎಂದು ಹೇಳಿ ಘೋಷಣೆಯನ್ನು ಮಾಡುತ್ತಾರೆ. ಆ ರೀತಿ ಅವರು ಈ ಆಧಾರವನ್ನು ಇಟ್ಟುಕೊಂಡು ಘೋಷಣೆ ಮಾಡಿರತಕ್ಕದ್ದು. ಸರ್ಕಾರದಿಂದ ಪ್ರತಿ ಐದು ವರ್ಷಕ್ಕೊಮ್ಮೆ ಈ ಸಮೀಕ್ಷೆ ನಡೆಯುತ್ತದೆ.

ಅಧ್ಯಕ್ಷರು: ಬೇಗ ಮಾಡಿಸಿ.

ಶ್ರೀ ಎ.ಮುನಿಯಪ್ಪ: ಆ ವರದಿಯನ್ನು ತರಿಸಿ ನಬಾರ್ಡ್‌ನವರಿಗೆ ಕಳುಹಿಸಕೊಡಬೇಕು. ನಬಾರ್ಡ್‌ನಿಂದ ಬಂದ ತಕ್ಷಣವೇ ನಾವು ಘೋಷಣೆ ಮಾಡುತ್ತೇವೆ.

ಶ್ರೀ ಬಿ.ಎನ್.ಬಚ್ಚೇಗೌಡ: ಮಾನ್ಯ ಸಚಿವರು ತಿಳಿಸಿದ ಹಾಗೆ ಕೆಲವು ಡಾರ್ಕ್ ಏರಿಯಾ ಎಂದು ಕೆಲವು ತಾಲ್ಲೂಕುಗಳಿವೆ. ಈ ರಾಜ್ಯದಲ್ಲಿರುವ 175 ತಾಲ್ಲೂಕುಗಳು. ನಮ್ಮಲ್ಲಿ ತಾವು ಹೇಳಿದ ಹಾಗೆಯೇ ಗ್ರೇ ತಾಲ್ಲೂಕು ಎಂದು ಹೇಳಿ ಮತ್ತೆ ಅಂತರ್ಜಲ ರೀಛಾರ್ಜ್ ಆಗಿಲ್ಲ ಮೇಲೆ ಬಂದಿಲ್ಲ ಎಂದು ಹೇಳಿ ಅದಕ್ಕೆ ಪವರ್ ಸ್ಯಾಂಕ್ಷನ್ಸ್ ನಿಲ್ಲಿಸಿದ್ದಾರೆ. ಮತ್ತು ಬೋರುಗಳನ್ನೂ ಕೂಡ ಕೊರೆಯುವ ಹಾಗೆ ಇಲ್ಲ. ಕೇಂದ್ರಸರ್ಕಾರದವರು ಮಾಡುತ್ತಿದ್ದಾರೆ, ಆ ಸಮೀಕ್ಷೆ ಬರಬೇಕು, ಅದನ್ನೆಲ್ಲಾ ಒಟ್ಟು ಸೇರಿಸುತ್ತೇವೆ, ಮಾಡುತ್ತೇವೆಂದು ಹೇಳಿದ್ದಾರೆ. ರಾಜ್ಯದಲ್ಲಿ ಈ ಬಗ್ಗೆ ಮಾಡಿರುವ ಸಮೀಕ್ಷೆಯೇನು? ಯಾವ ಯಾವ ತಾಲ್ಲೂಕು ಕ್ಲಾಸಿಫಿಕೇಷನ್ ಇದರಲ್ಲಿ ಇದೆ? ಮತ್ತು ತಾವು ಹೇಳಿದ ಹಾಗೆ ರೀಛಾರ್ಜ್ ಪುನಶ್ಚೇತನ ಆಗಿರುವ ಏರಿಯಾಗಳು ಯಾವುದು? ಅದನ್ನು ಐಡೆಂಟಿಫೈ ಮಾಡಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ ಮಾನ್ಯ ಸಚಿವರು ಏನು ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ ಎಂದು ತಿಳಿಸಬೇಕು.

ಶ್ರೀ ಎಂ.ಚಂದ್ರಪ್ಪ(ಭರಮಸಾಗರ): ಮಾನ್ಯ ಅಧ್ಯಕ್ಷರೇ, ಚಿತ್ರದುರ್ಗ ಜಿಲ್ಲೆಯಲ್ಲಿ ಕಳೆದ ಐದು ವರ್ಷಗಳಿಂದ ಮಳೆ ಬಂದಿಲ್ಲ ಎಂದು ಹೇಳಿ ತಮಗೆಲ್ಲಾ ಗೊತ್ತಿರುವ ವಿಚಾರ. ಕಳೆದ ಸಲ ಚಿತ್ರದುರ್ಗ ಜಿಲ್ಲೆಯಲ್ಲಿ ಚಳ್ಳಕೆರೆ ತಾಲ್ಲೂಕು ಮತ್ತು ಚಿತ್ರದುರ್ಗದಲ್ಲಿ ಬಹಳಷ್ಟು ಮಳೆಯಾಗಿರುವ ತಾಲ್ಲೂಕುಗಳು. ಆದರೆ ಆ ಎರಡೂ ತಾಲ್ಲೂಕುಗಳಲ್ಲಿ ಹೆಚ್ಚು ಮಳೆಯಾಗಿದ್ದರೂ ಕೂಡ ಈ ವರ್ಷದಿಂದ ಅದನ್ನು ಗ್ರೇ ಏರಿಯಾ ಎಂದು ಮಾಡಿ 25 ಸಾವಿರ ರೂಪಾಯಿಗಳನ್ನು ಕೊಡುತ್ತೇವೆಂದರೂ ಅವರಿಗೆ ಕರೆಂಟ್ ಕೊಡುವ ಪರಿಸ್ಥಿತಿ ಇಲ್ಲ. ಆದ್ದರಿಂದ ಚಿತ್ರದುರ್ಗ ಜಿಲ್ಲೆಯಲ್ಲಿ ವಾಣಿವಿಲಾಸ ಸಾಗರ ಕೆರೆ ಈ ವರ್ಷ ತುಂಬಿದೆ. ಅದೇ ರೀತಿ ರಾಣಿ ಕೆರೆ ಚಳ್ಳಕೆರೆಯಲ್ಲಿ ತುಂಬಿದ್ದರೂ ಕೂಡ ಈ ಸಾರಿ ಗ್ರೇ ಏರಿಯಾ ಎಂದು ಮಾಡಿದ್ದಾರೆ. ಆ ದೃಷ್ಟಿಯಿಂದ ತಾವು ಅದನ್ನು ತೆಗೆಯಬೇಕೆಂದು ಹೇಳಿ ನಾನು ತಮ್ಮ ಮುಖಾಂತರ ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಆರ್.ಅಶೋಕ್(ಉತ್ತರಹಳ್ಳಿ): ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರ ಜಿಲ್ಲೆಯನ್ನೂ ಇದೇ ರೀತಿ ಡಾರ್ಕ್ ಏರಿಯಾ ಎಂದು ಟ್ರೀಟ್ ಮಾಡಿದ್ದೀರಿ. ಇಲ್ಲಿಯೂ ಸಹ ಸಾವಿರಾರು ಜನರು ಬೋರ್‌ವೆಲ್‌ನ್ನು ಹಾಕಿಕೊಂಡಿದ್ದಾರೆ. ಬೆಂಗಳೂರು ನಗರ

ಬಾರ್ಡರ್ ಬರುವುದರಿಂದ ಸಾವಿರಾರು ಜನರು ಬೋರ್‌ವೆಲ್‌ಗಳನ್ನು ಹಾಕಿಕೊಂಡಿದ್ದಾರೆ. ಯಾರಿಗೂ ಇದುವರೆಗೂ ಪವರ್ ಕನೆಕ್ಷನ್‌ನ್ನು ಕೊಟ್ಟಿಲ್ಲ. ಇವರು ಮಾಡಿರುವ ಒಂದು ಕಾನೂನಿಗೋಸ್ಕರ ತುಂಬಾ ತೊಂದರೆ ಕೊಡುತ್ತಿದ್ದಾರೆ. ನಮ್ಮಲ್ಲಿ 150 ಅಡಿಗೇ ನೀರು ಸಿಗುತ್ತದೆ. ನಮ್ಮಲ್ಲಿ ಕೆಲವು ಕಡೆ 100 ಅಡಿಗೂ ಸಿಕ್ಕಿದೆ. ಆದರೂ ಇವರು ಅದನ್ನು ಡಾರ್ಕ್ ಏರಿಯಾ ಎಂದು ಟ್ರೀಟ್ ಮಾಡಿ ಕೆಇಬಿಯವರು ತುಂಬಾ ಕಿರುಕುಳವನ್ನು ಕೊಡುತ್ತಿದ್ದಾರೆ. ದಿನವೂ ನಮಗೆ ಅದೇ ದೊಡ್ಡ ತೊಂದರೆಯಾಗಿದೆ. ದಯವಿಟ್ಟು ಬೆಂಗಳೂರು ನಗರ ಜಿಲ್ಲೆಯನ್ನು ಡಾರ್ಕ್ ಏರಿಯಾ ಎಂದು ಇರುವುದನ್ನು ತೆಗೆದು ಹಾಕಬೇಕು. ನೀರು ನೂರು ಅಡಿಗೂ ಕೂಡ ಸಿಗುತ್ತೆ ಕೆಇಬಿಯವರ ಕಿರುಕುಳವನ್ನು ದಯವಿಟ್ಟು ತಪ್ಪಿಸಬೇಕು.

ಶ್ರೀ ಎ.ನಾಗರಾಜ್(ಮಾಲೂರು): ಮಾನ್ಯ ಅಧ್ಯಕ್ಷರೇ, ನಮ್ಮ ಮಾಲೂರು ತಾಲ್ಲೂಕು ಸಹಾ ಬ್ಲಾಕ್ ಏರಿಯಾದಲ್ಲಿದೆ. ಇದು ವೈಜ್ಞಾನಿಕವಾಗಿ ಅಲ್ಲೇನು ಅಂತರ್ಜಲ ಪರ್‌ಸೆಂಟೇಜ್ ಜಾಸ್ತಿ ಅಲ್ಲಿ ಯೂಸ್ ಆಗಿದ್ದರೆ ಅದರ ಮೇಲೆ ಅದನ್ನು ಡಿಕ್ಲೇರ್ ಮಾಡುತ್ತಾರೆ. ಆದರೆ ನನ್ನ ಪ್ರಶ್ನೆ ಏನೆಂದರೆ ಇಡೀ ತಾಲ್ಲೂಕನ್ನು ಬ್ಲಾಕ್ ಏರಿಯಾ ಎಂದು ಮಾಡುವ ಬದಲು ಈ ಗಣಿ ಮತ್ತು ಭೂವಿಜ್ಞಾನ ಇಲಾಖೆಯವರು ಈ ಜಲಾನಯನ ಪ್ರದೇಶದಲ್ಲಿ ಹಳ್ಳಿವಾರು ಸಮೀಕ್ಷೆಯನ್ನು ಮಾಡಿ ಅಲ್ಲಿ ಕೆಲವು ಹಳ್ಳಿಗಳಲ್ಲಿ ಬಹಳ ಯೂಸ್ ಮಾಡಿರುತ್ತಾರೆ. ಕೆಲವು ಹಳ್ಳಿಗಳಲ್ಲಿ ಇನ್ನೂ ಯೂಸ್ ಮಾಡಿರುವುದಿಲ್ಲ. ಅಂಥ ಹಳ್ಳಿಗಳನ್ನು ಬ್ಲಾಕ್ ಏರಿಯಾದಿಂದ ಹೊರತುಪಡಿಸುತ್ತೀರಾ ಎನ್ನುವುದು ನನ್ನ ಪ್ರಶ್ನೆ.

ಶ್ರೀ ಷಹಜಹಾನ್ ಇಸ್ಮಾಯಿಲ್ ದೊಂಗರಗಾಂವ್(ಅಥಣಿ): ಮಾನ್ಯ ಅಧ್ಯಕ್ಷರೇ, ನಮ್ಮಲ್ಲಿ ಎಷ್ಟೋ ಕಿಲೋಮೀಟರ್ ನದಿ ಹರಿಯುತ್ತದೆ. ಆ ರಿವರ್ ಪಕ್ಕದಲ್ಲಿರುವ ಪ್ರದೇಶಗಳಲ್ಲಿ ನೀರು ಸಾಕಷ್ಟು ಇದೆ. ಆದರೂ ತಾಲ್ಲೂಕನ್ನು ಬೂದು ಪ್ರದೇಶ ಎಂದು ಡಿಕ್ಲೇರ್ ಮಾಡುವುದರಿಂದ ಕೆಲವೊಂದು ಹಳ್ಳಿಯ ಜನರಿಗೆ ನೀರು ಲಭ್ಯವಿದ್ದರೂ ಅಲ್ಲಿ ಸೌಕರ್ಯಗಳು ಸಿಗುವುದಿಲ್ಲ. ವಿದ್ಯುತ್ ಪೂರೈಕೆಯಾಗಲಿ, ಬ್ಯಾಂಕ್ ಲೋನ್ಸ್ ಆಗಲೀ ಸಿಗುವುದಿಲ್ಲ. ನನ್ನ ವಿನಂತಿ ಏನೆಂದರೆ ಇದನ್ನು ಜಿಯಾಲಜಿಕಲ್ ಸರ್ವೆ ಮಾಡುವಾಗ ಇಡೀ ತಾಲ್ಲೂಕನ್ನು ಬೂದು ಪ್ರದೇಶ ಎಂದು ಡಿಕ್ಲೇರ್ ಮಾಡುವುದಕ್ಕಿಂತಲೂ ಯಾವ ಯಾವ ಹಳ್ಳಿಗಳಲ್ಲಿ ನೀರಿನ ಅಂತರ್ಜಲ ಕಡಿಮೆಯಾಗಿದೆ, ಅದನ್ನು ಮಾತ್ರ ಮಾಡಬೇಕು. ಅದನ್ನು ಪರಿಶೀಲನೆ ಮಾಡಬೇಕೆಂದು ನಾನು ತಮ್ಮಲಕ ವಿನಂತಿಸಿಕೊಳ್ಳುತ್ತೇನೆ.

೧೨.೧೦ ಪಿಎಂ

ಶ್ರೀ ವಿ.ಮುನಿಯಪ್ಪ: ಮಾನ್ಯ ಅಧ್ಯಕ್ಷರೆ, 1994ರಲ್ಲಿ ಸಮೀಕ್ಷೆ ಮಾಡಿರತಕ್ಕ ವರದಿಯ ಆಧಾರದ ಮೇಲೆ ಸುಮಾರು ನಮ್ಮ ರಾಜ್ಯದಲ್ಲಿ 72 ತಾಲ್ಲೂಕುಗಳನ್ನು ಬೂದು ಮತ್ತು ಕಪ್ಪು ತಾಲ್ಲೂಕುಗಳೆಂದು ನಬಾರ್ಡ್‌ನವರು ಘೋಷಣೆ ಮಾಡಿದ್ದಾರೆ. ನಬಾರ್ಡ್‌ನವರು ಘೋಷಣೆ ಮಾಡಿದಂತಹ ಸಂದರ್ಭದಲ್ಲಿ ಕೆಲವು ನಿರ್ಬಂಧಗಳನ್ನೂ ಹೇರಿದ್ದಾರೆ. ಈ ಸಾಲಗಳನ್ನು ಆ ಪ್ರದೇಶಗಳಲ್ಲಿ ಹೆಚ್ಚು ಕೊಡಬಾರದು. ಅಂತರ್ಜಲ ದುರ್ಬಳಕೆ ಆಗಬಾರದು. ಈ ಅಂತರ್ಜಲ ದುರ್ಬಳಕೆಯನ್ನು ತಡೆಯಬೇಕು ಮತ್ತು ಇರತಕ್ಕ ನೀರನ್ನು ಸೇವಿಂಗ್ಸ್ ಮಾಡಿ ಅದನ್ನು ರೆಗ್ಯುಲೇಟ್ ಮಾಡಬೇಕು ಎನ್ನತಕ್ಕ ಇಂಟರೆಸ್ಟ್ ಇಟ್ಟುಕೊಂಡು ನಬಾರ್ಡ್‌ನವರು ಕೆಲವು ಕಂಡೀಷನ್ಸ್ ಹಾಕಿ ನಮಗೆ ಕೊಟ್ಟಿದ್ದಾರೆ. ಈಗ ಪ್ರತಿ ಐದು ವರ್ಷಕ್ಕೆ ಒಮ್ಮೆ ಸರ್ವೆ ಮಾಡಲಾಗುತ್ತದೆ. ಒಂದೇ ತರಹ ಇರುವುದಿಲ್ಲ ಅದೇ ಪರ್ಮನೆಂಟ್ ಇರುವುದಿಲ್ಲ. ಪ್ರತಿ ಐದು ವರ್ಷಕ್ಕೊಮ್ಮೆ ಸಮೀಕ್ಷೆ ಮಾಡತಕ್ಕಂಥಹ ವ್ಯವಸ್ಥೆ ಮತ್ತ ಜಾರಿಯಲ್ಲಿದೆ. ಅದೇ ಪ್ರಕಾರ 1999ರಲ್ಲಿ ತಾಲ್ಲೂಕುವಾರು ಸಮೀಕ್ಷೆ ಏನು ಮಾಡುತ್ತಿದ್ದರು, ಅದನ್ನು ಬದಲಾವಣೆ ಮಾಡಿ ವಾಟರ್ ಶೆಡ್ ವೈಸ್ ಸಮೀಕ್ಷೆ ಮಾಡತಕ್ಕಂಥ ವ್ಯವಸ್ಥೆಯನ್ನು ಈ ಬಾರಿ ಅನುಸರಿದ್ದಾರೆ. ಆದ್ದರಿ,ದ ಅಂತರ್ಜಲ ಮೌಲ್ಯೀಕರಣ ಸಮಿತಿ ಎಂದು ಕೇಂದ್ರದಲ್ಲಿದೆ. 1997ರಲ್ಲಿ ಅವರು ಒಂದು ಸಲಹ ಮಾಡಿದ್ದರು. ಆ ಸಲಹೆ ಪ್ರಕಾರ ನೀವು ವಾಟರ್ ಶೆಡ್ ವೈಸ್ ಸಮೀಕ್ಷೆ ಮಾಡಿ ಎನ್ನತಕ್ಕ ಒಂದು ಆದೇಶವನ್ನು ಕೊಟ್ಟಿದ್ದಾರೆ. ಅದರ ಪ್ರಕಾರ 1999ರಲ್ಲಿ ಸಮೀಕ್ಷೆ ಮಾಡಿದ್ದೇವೆ. ನಮ್ಮ ರಾಜ್ಯದ ಗ್ರೌಂಡ್ ವಾಟರ್ ಡಿಪಾರ್ಟ್‌ಮೆಂಟ್ ಮತ್ತು ಕೇಂದ್ರದ ಅಂತರ್ಜಲ ಬೋರ್ಡ್‌ನವರು ಸಹ ಸಮೀಕ್ಷೆ ಮಾಡಿ ಈಗ ಅಂತಿಮವಾಗಿ ಅದನ್ನು ನಬಾರ್ಡ್‌ನವರಿಗೆ ಕೊಟ್ಟಿದ್ದಾರೆ. ನಬಾರ್ಡ್‌ನವರು ಅದನ್ನೆಲ್ಲಾ ಸಮನ್ವಯ ಮಾಡಿ ಅವರು ಘೋಷಣೆ ಮಾಡುತ್ತಾರೆ. ಯಾವ ತಾಲ್ಲೂಕು ಕಪ್ಪು ಯಾವ ತಾಲ್ಲೂಕು ಬೂದು ಎಂದು ಘೋಷಣೆ ಮಾಡುತ್ತಾರೆ. ಅದು ಅಂತರ್ಜಲ ಅವೈಲಬಲಿಟ ನೋಡಿಕೊಂಡು ಮಾಡುತ್ತಾರೆ. ಅಂತರ್ಜಲದ ಲಭ್ಯತೆ ಮೇಲೆ ಅದನ್ನು ಘೋಷಣೆ ಮಾಡುತ್ತಾರೆ. ಘೋಷಣೆ ಅತ್ಯಂತ ಶೀಘ್ರದಲ್ಲಿ ಬರತಕ್ಕಂಥ ನಿರೀಕ್ಷೆ ಇಟ್ಟುಕೊಂಡಿದ್ದೇವೆ ಮತ್ತು ತಾವೆಲ್ಲರೂ ಏನು ಆಗ್ರಹ ಮಾಡಿದ್ದೀರಿ, ಮತ್ತ ನಬಾರ್ಡ್‌ನವರಿಗೆ ರಾಜ್ಯ ಸರ್ಕಾರದಿಂದ ಒಂದು ಪತ್ರವನ್ನೂ ಬರೆಯುತ್ತೇವೆ. ಆ ವರದಿಯ ಆಧಾರದ ಮೇಲೆ ಶೀಘ್ರವಾಗಿ ಘೋಷಣೆ ಮಾಡಿ ಕಳಿಸಿಕೊಡಿ ಎಂದು ನಾವು ಒತ್ತಾಯವನ್ನೂ ತರುತ್ತೇವೆ.

ಅಧ್ಯಕ್ಷರು: ಪ್ರಶ್ನೋತ್ತರ ವೇಳೆ ಮುಕ್ತಾಯವಾಯಿತು.